ಕ್ರಿಮಿನಲ್ ಮಿಸಲೆನಿಯಸ್ ಸಂಖ್ಯೆ - 1/2026
ಪಿಡಬ್ಲ್ಯೂ - 01
ದಿನಾಂಕ: 22-04-2026
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆ - ಅರ್ಜಿದಾರರ ಪರ ಶ್ರೀ. ಸಿ ಎಸ್ ಎಂ ವಕೀಲರಿಂದ.**

ಈ ಅರ್ಜಿಯಲ್ಲಿ ನಾನು ಅರ್ಜಿದಾರಳಾಗಿದ್ದು, ಇಂದು ನಾನು ನನ್ನ ಮೌಖಿಕ ಸಾಕ್ಷ್ಯದ ಬದಲು ಈ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಇದರಲ್ಲಿ ಬರೆದ ಎಲ್ಲ ವಿಷಯ ನಿಜ ಮತ್ತು ಸರಿ ಇದ್ದು ನನಗೆ ಗೊತ್ತಿದೆ.

ನಾನು ಈ ಕೆಳಕಂಡ ದಸ್ತಾವೇಜುಗಳನ್ನು ಹಾಜರು ಪಡಿಸಿದ್ದೇನೆ.

ಅರ್ಜಿದಾರಳು ಮತ್ತು ಎದುರುದಾರರ ಮದುವೆಯ ಆಮಂತ್ರಣ ಪತ್ರಿಕೆಯನ್ನು ಹಾಜರುಪಡಿಸಿದ್ದು ನಿಪಿ- 1 ಎಂದು ಗುರುತಿಸಲಾಯಿತು.

ಖಾಲಾಹುಣಸಿಕಟ್ಟಿ ಗ್ರಾಮದ ಸರ್ವೆ ನಂ. 33/3 ಮತ್ತು 34/1ಅ/2 ಮತ್ತು ಭೂಹುಲಿಕಟ್ಟಿ ಗ್ರಾಮದ ಸರ್ವೆ ನಂ. 112 ರ ಉತಾರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ- 2 ರಿಂದ 4 ಎಂದು ಗುರುತಿಸಲಾಯಿತು.

ಸಾಕ್ಷಿಯ ಮೂಲ ಆಧಾರಕಾರ್ಡನೊಂದಿಗೆ ತಾಳೆ ಮಾಡಿನೋಡಿ ಅದರ ದೃಢಿಕೃತ ನಕಲನ್ನು ನಿಪಿ- 5 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೋರಿಕೊಂಡಂತೆ ಆದೇಶ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀಸವಾಲು: ಎದುರುದಾರರು ಏಕ ತರ್ಫಿ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು